ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಸಂಸ್ಥೆಗಳಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ-2023ರ ವೇಳಾಪಟ್ಟಿ ಮತ್ತು ಬೆಲ್ ಸಮಯಗಳನ್ನು ಈ ಕೆಳಗೆ ನೀಡಲಾಗಿದೆ.**

## ಸ್ಪರ್ಧಾತ್ಮಕ ಪರೀಕ್ಷಾ ವೇಳಾಪಟ್ಟಿ

| ದಿನಾಂಕ: ದಿನ: | ಹುದ್ದೆಗಳು: | ಇಲಾಖೆ | ಪತ್ರಿಕೆ: | ಸಮಯ: | ಅಂಕಗಳು: |
|---|---|---|---|---|---|
| **20-11-2023 ಸೋಮವಾರ** | ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ) – ಗ್ರೂಪ್-ಬಿ, ಸಹಾಯಕ ವ್ಯವಸ್ಥಾಪಕರು (ಪರ್ಸನಲ್), ಸಹಾಯಕ ವ್ಯವಸ್ಥಾಪಕರು (ಫಾರ್ಮ್) ಸಹಾಯಕ ವ್ಯವಸ್ಥಾಪಕರು (ಟೂರ್ಸ್ & ಟ್ರಾವೆಲ್ಸ್) ಸಹಾಯಕ ವ್ಯವಸ್ಥಾಪಕರು (ಇ.ಡಿ.ಪಿ) | KEONICS & MSIL | Paper-2 | ಮಧ್ಯಾಹ್ನ 02.30 ರಿಂದ 04.30 ರ ವರೆಗೆ | 200 |
| **21-11-2023 ಮಂಗಳವಾರ** | ಸಹಾಯಕ ವ್ಯವಸ್ಥಾಪಕರು (ಸೇಲ್ಸ್) | MSIL | Paper-2 | ಮಧ್ಯಾಹ್ನ 02.30 ರಿಂದ 04.30 ರ ವರೆಗೆ | 200 |
| **22-11-2023 ಬುಧವಾರ** | ಸಹಾಯಕ ವ್ಯವಸ್ಥಾಪಕರು | KFCSCL | Paper-2 | ಮಧ್ಯಾಹ್ನ 02.30 ರಿಂದ 04.30 ರ ವರೆಗೆ | 200 |
| 23-11-2023 ಗುರುವಾರ | ಸಹಾಯಕ ವ್ಯವಸ್ಥಾಪಕರು (ತಾಂತ್ರಿಕೇತರ) – ಗ್ರೂಪ್-ಬಿ (200)<br>ಆಪ್ತ ಸಹಾಯಕರು – ಗ್ರೂಪ್-ಸಿ (100) | KEONICS & KBOCWWB | Paper-2 | ಮಧ್ಯಾಹ್ನ 02.30 ರಿಂದ 04.30 ರ ವರೆಗೆ | 200 / 100 |
| 24-11-2025 ಶುಕ್ರವಾರ | ಸಹಾಯಕ ವ್ಯವಸ್ಥಾಪಕರು (ಅಕೌಂಟ್ಸ್) | MSIL | Paper-2 | ಮಧ್ಯಾಹ್ನ 02.30 ರಿಂದ 04.30 ರ ವರೆಗೆ | 200 |
| 25-11-2023 ಶನಿವಾರ | ಗುಣಮಟ್ಟ ನಿರೀಕ್ಷಕರು | KFCSCL | Paper-2 | ಮಧ್ಯಾಹ್ನ 02.30 ರಿಂದ 04.30 ರ ವರೆಗೆ | 100 |

## ***ಪರೀಕ್ಷೆಯ ಬೆಲ್ ಸಮಯ ಮತ್ತು ವಿವರಗಳು***

ಈ ಬೆಲ್ ಸಮಯವನ್ನು ಯಾವುದೇ ಬದಲಾವಣೆ ಮಾಡದೆ ಅಥವಾ ದೂರು ಬರದಂತೆ ನಿಖರವಾಗಿ ಅನುಸರಿಸಲು ಸೂಚಿಸಿದೆ.

| ಕ್ರ ಸಂ | ಬೆಲ್ ಸಂಖ್ಯೆ | ಮಧ್ಯಾಹ್ನದ ಅವಧಿ | ವಿವರಗಳು |
|---|---|---|---|
| 01 | ಮೊದಲನೇ ಬೆಲ್ | ಮ. 2.00 | • ಪ್ರವೇಶ ಪತ್ರವನ್ನು ಮತ್ತು ಗುರುತಿನ ಚೀಟಿಯನ್ನು ತೋರಿಸಿದರೆ ಅಭ್ಯರ್ಥಿಗಳಿಗೆ ಪರೀಕ್ಷೆಯ ಕೊಠಡಿಯನ್ನು ಪ್ರವೇಶಿಸಿ ನಿಗದಿತ ಆಸನದಲ್ಲಿ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗುವುದು.<br>• ಕೊಠಡಿ ಮೇಲ್ವಿಚಾರಕರು ಪ್ರವೇಶ ಪತ್ರದಲ್ಲಿರುವ ಭಾವಚಿತ್ರವನ್ನು ಮತ್ತು ಗುರುತಿನ ಚೀಟಿಯಲ್ಲಿ ಮುದ್ರಿತವಾಗಿರುವ ಭಾವಚಿತ್ರವನ್ನು ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಯೊಂದಿಗೆ ಪರಿಶೀಲಿಸುತ್ತಾರೆ.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಗೆ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ವಿತರಿಸುತ್ತಾರೆ. ಅಭ್ಯರ್ಥಿಗಳು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ತಮ್ಮ ಹೆಸರನ್ನು ಬರೆಯಬೇಕು.<br>• ನಂತರ ಅಭ್ಯರ್ಥಿಗಳು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಎಚ್ಚರದಿಂದ ನೊಂದಣಿ ಸಂಖ್ಯೆಯನ್ನು ಬರೆದು ಸಂಬಂಧಿಸಿದ ವೃತ್ತಗಳನ್ನು ತಪ್ಪದೇ ತುಂಬಬೇಕು. (ಮತ್ತೊಮ್ಮೆ ಪರಿಶೀಲಿಸುವುದು ಸೂಕ್ತ.)<br>• ಅಭ್ಯರ್ಥಿಗಳು ತಾವು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದಿರುವ ನೊಂದಣಿ ಸಂಖ್ಯೆಯನ್ನು, ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ನೊಂದಣಿ ಸಂಖ್ಯೆಗೆ ಅನುಗುಣವಾಗಿದೆಯೆ ಎಂದು ಪರಿಶೀಲಿಸಿಕೊಳ್ಳಬೇಕು. |
| 02 | ಎರಡನೇ ಬೆಲ್ | ಮ. 2.15 | • ಎರಡನೆಯ ಬೆಲ್ ಆದ ನಂತರ ಮ. 2.20 ಕ್ಕೆ, ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು / ಪ್ರಶ್ನೆ ಪತ್ರಿಕಾ ಪಾಲಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕಾ ಲಕೋಟೆಗಳನ್ನು ಕೊಠಡಿ ಮೇಲ್ವಿಚಾರಕರುಗಳಿಗೆ ಅವರುಗಳ ಕೊಠಡಿಗೆ ತಂದು ಕೊಡುತ್ತಾರೆ.<br>• ಕೊಠಡಿ ಮೇಲ್ವಿಚಾರಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕಾ ಲಕೋಟೆಯನ್ನು ಅಭ್ಯರ್ಥಿಗಳಿಗೆ ತೋರಿಸಿ ಈ ರೀತಿ ಜೋರಾಗಿ ಹೇಳಬೇಕು. **"ಪ್ರಶ್ನೆ ಪತ್ರಿಕೆಗಳನ್ನು ಸೀಲ್ ಮಾಡಿರುವ ಲಕೋಟೆಯಲ್ಲಿ ಇಡಲಾಗಿದೆ ಮತ್ತು ಲಕೋಟೆಯು ಒಡೆದಿರುವುದಿಲ್ಲ".** ನಂತರ ಲಕೋಟೆಯ ಮೇಲೆ ಹಾಜರಿರುವ ಯಾರಾದರೂ ಇಬ್ಬರು ಅಭ್ಯರ್ಥಿಗಳಿಂದ ಸಹಿಯನ್ನು ಪಡೆಯುತ್ತಾರೆ.<br>• ಮ. 2.25ಕ್ಕೆ ಕೊಠಡಿ ಮೇಲ್ವಿಚಾರಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕಾ ಲಕೋಟೆಯನ್ನು ತೆರೆದು, ನಂತರ ಕೊಠಡಿಯಲ್ಲಿರುವ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಯನ್ನು ಸೂಕ್ತ ರೀತಿಯಲ್ಲಿ ವಿತರಿಸುತ್ತಾರೆ.<br>• ಅಭ್ಯರ್ಥಿಗಳು ಪ್ರಶ್ನೆಪತ್ರಿಕೆಯಲ್ಲಿನ ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿನ ನಿಗದಿತ ಜಾಗದಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ತುಂಬಬೇಕು. ನಂತರ ಅಭ್ಯರ್ಥಿಗಳು ಓಎಂಆರ್‌ನಲ್ಲಿ ನಿಗದಿತ ಜಾಗದಲ್ಲಿ ಸಹಿಯನ್ನು ಹಾಕುತ್ತಾರೆ.<br>**ವಿ.ಸೂ.:** ಪ್ರಶ್ನೆ ಪತ್ರಿಕಾ ಲಕೋಟೆಯನ್ನು ತೆರೆಯಲು ಕೊಠಡಿ ಮೇಲ್ವಿಚಾರಕರು ಮಾತ್ರ ಅಧಿಕಾರವನ್ನು ಹೊಂದಿರುತ್ತಾರೆ. ಕೊಠಡಿ ಮೇಲ್ವಿಚಾರಕರನ್ನು ಹೊರತುಪಡಿಸಿ ಬೇರೆ ಯಾವುದೇ ಅಧಿಕಾರಿ / ಸಿಬ್ಬಂದಿ ವರ್ಗ / ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು / ಪ್ರಶ್ನೆ ಪತ್ರಿಕಾ ಪಾಲಕರು / ಅಧ್ಯಕ್ಷರು / ಕಾರ್ಯದರ್ಶಿ / ಆಡಳಿತಾಧಿಕಾರಿ ಮುಂತಾದವರುಗಳು ಪ್ರಶ್ನೆ ಪತ್ರಿಕಾ ಲಕೋಟೆಯನ್ನು ತೆರೆಯಲು ಅಧಿಕಾರವನ್ನು ಹೊಂದಿರುವುದಿಲ್ಲ.<br>• ಮೂರನೇ ಬೆಲ್ ಆಗುವವರೆಗೂ ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಕಿರುಪುಸ್ತಕವನ್ನು ನೋಡಲು ಅಥವಾ ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಉತ್ತರಿಸುವುದಕ್ಕೆ ಅವಕಾಶ ಕೊಡಲಾಗುವುದಿಲ್ಲ.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳ ಸಹಿಯನ್ನು ನಾಮಿನಲ್ ರೋಲ್ ನಲ್ಲಿ ಪಡೆದು ಮುದ್ರಿತವಾಗಿರುವ ಸಹಿಯನ್ನು ತಾಳೆ ಮಾಡುತ್ತಾರೆ. |
| 03 | ಮೂರನೇ ಬೆಲ್ | ಮ.2.30 | •ಅಭ್ಯರ್ಥಿಗಳು ಓಎಂಆರ್ ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಅವಕಾಶ ಕೊಡಲಾಗುವುದು.<br>•ಈ ಬೆಲ್ ಆದ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಅಥವಾ ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅವಕಾಶವಿರುವುದಿಲ್ಲ. |
| 04 | ನಾಲ್ಕನೇ ಬೆಲ್ | ಮ.3.30 | •ಇದು ಮೊದಲನೆಯ ಎಚ್ಚರಿಕೆ ಬೆಲ್ – ಪರೀಕ್ಷೆಯ ಒಂದು ಗಂಟೆಯ ಅವಧಿ ಮುಗಿದಿರುವುದಕ್ಕಾಗಿ. |
| 05 | ಐದನೇ ಬೆಲ್ | ಮ.4.00 | •ಇದು ಎರಡನೆಯ ಎಚ್ಚರಿಕೆ ಬೆಲ್ – ಪರೀಕ್ಷೆ ಮುಗಿಯಲು ಮೂವತ್ತು ನಿಮಿಷಗಳು ಬಾಕಿ ಉಳಿದಿವೆ ಎಂದು ತಿಳಿಸುತ್ತಾರೆ |
| 06 | ಆರನೇ ಬೆಲ್ | ಮ. 4.25 | •ಇದು ಕೊನೆಯ ಎಚ್ಚರಿಕೆಯ ಬೆಲ್ – ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಗೆ ಪರೀಕ್ಷೆ ಮುಗಿಯಲು ಕೇವಲ ಐದು ನಿಮಿಷಗಳು ಬಾಕಿ ಉಳಿದಿವೆ ಎಂದು ತಿಳಿಸುತ್ತಾರೆ. |
| 07 | ಏಳನೇ ಹಾಗೂ ಕೊನೆಯ ಬೆಲ್ | ಮ. 4.30 | • ಪರೀಕ್ಷೆ ಮುಕ್ತಾಯ.<br>• ಈ ಬೆಲ್ ಆದ ತಕ್ಷಣ ಕೊಠಡಿ ಮೇಲ್ವಿಚಾರಕರು ಎಲ್ಲಾ ಅಭ್ಯರ್ಥಿಗಳು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವುದನ್ನು ನಿಲ್ಲಿಸಿದ್ದಾರೆ ಎಂದು ಖಾತ್ರಿಮಾಡಿಕೊಳ್ಳಬೇಕು.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಂದ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಪಡೆಯುವುದು.<br>• ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರ ಹೋಗುವುದಕ್ಕೆ ಮೊದಲು ಓ.ಎಂ.ಆರ್ ಉತ್ತರ ಪತ್ರಿಕೆಯನ್ನು ಅಭ್ಯರ್ಥಿಗಳಿಂದ ಪಡೆಯಲಾಗಿದೆಯೇ ಎಂದು ಖಾತ್ರಿ ಮಾಡಿಕೊಳ್ಳಬೇಕು.<br>• ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಉತ್ತರ ಪತ್ರಿಕೆಯ ಮೇಲ್ಭಾಗದ ಹಾಳೆಯನ್ನು (ಕಚೇರಿ ಪ್ರತಿ) ನಿಧಾನವಾಗಿ ತೆಗೆದು ತಮ್ಮೊಡನೆ ಇಟ್ಟುಕೊಳ್ಳಬೇಕು.<br>• ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ಹಾಳೆಯನ್ನು (ಅಭ್ಯರ್ಥಿಯ ಪ್ರತಿ) ಸಂಬಂಧಿಸಿದ ಅಭ್ಯರ್ಥಿಗಳಿಗೆ ಹಿಂದಿರುಗಿಸಬೇಕು. |

**ಗಮನಿಸಿ:** ಪರೀಕ್ಷಾ ಕರ್ತವ್ಯದಲ್ಲಿ ನಿರತರಾಗಿರುವ ಅಧಿಕಾರಿಗಳು ನೀಡುವ ಎಲ್ಲಾ ಸೂಚನೆಗಳನ್ನು ಅಭ್ಯರ್ಥಿಗಳು ತಪ್ಪದೇ ಪಾಲಿಸಬೇಕು. ಸೂಚನೆಗಳನ್ನು ಪಾಲಿಸದೇ ಇರುವ ಅಭ್ಯರ್ಥಿಗಳನ್ನು ದುಷ್ಕೃತ್ಯದ ವಿಧಾನವೆಂದು ಪರಿಗಣಿಸಲಾಗುವುದು; ಹಾಗು ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಈ ಕೆಳಕಂಡ ರೀತಿಯ ತಪ್ಪುಗಳನ್ನು ಎಸಗಿದಲ್ಲಿ; ಅಂತಹ ಅಭ್ಯರ್ಥಿಗಳ ವಿರುದ್ಧ ಶಿಸ್ತು ಕ್ರಮ / ಅಪರಾಧ ಮೊಕದ್ದಮೆಯನ್ನು ಹೂಡಲಾಗುವುದು:

ಗಲಾಟೆ ಮಾಡಿದರೆ / ನಿಶ್ಯಬ್ದತೆಯನ್ನು ಕಾಪಾಡದಿದ್ದರೆ; ಪರೀಕ್ಷಾ ಸಮಯದಲ್ಲಿ ವಿಷಯಕ್ಕೆ ಸಂಬಂಧಿಸಿದ ಪುಸ್ತಕ, ಚೀಟಿ ಇತ್ಯಾದಿಗಳನ್ನು ಬಳಸಿದರೆ; ಬೇರೆ ಅಭ್ಯರ್ಥಿಗಳ ಜೊತೆ ಮಾತನಾಡುವುದು ಅಥವಾ ಸಂಜ್ಞೆ ಮಾಡುವುದು; ಅಭ್ಯರ್ಥಿಯು ಬೇರೆ ಅಭ್ಯರ್ಥಿಗಳ ಉತ್ತರ ಪತ್ರಿಕೆಯಿಂದ ಅಥವಾ ಇನ್ನಾವುದೇ ಮೂಲಗಳಿಂದ ನಕಲು ಮಾಡುತ್ತಿದ್ದರೆ; ಅಭ್ಯರ್ಥಿಯು ತನ್ನ ಉತ್ತರ ಪತ್ರಿಕೆ ಬೇರೆ ಕಡೆ ವರ್ಗಾಯಿಸಿದರೆ; ಬದಲಿ ಅಭ್ಯರ್ಥಿಯಾಗಿದ್ದರೆ; ಪರೀಕ್ಷಾ ಅವಧಿಯಲ್ಲಿ ಅಥವಾ ಪರೀಕ್ಷೆಯ ನಂತರ ಉತ್ತರ ಪತ್ರಿಕೆಯನ್ನು ಪರೀಕ್ಷಾ ಕೊಠಡಿಯಿಂದ ಹೊರಗಡೆ ತೆಗೆದುಕೊಂಡು ಹೋದಲ್ಲಿ; ಉತ್ತರ ಪತ್ರಿಕೆಯನ್ನು ಹರಿದು ಹಾಕುವುದು ಅಥವಾ ಇನ್ನಾವುದೇ ಪರೀಕ್ಷಾ ಅವ್ಯವಹಾರಗಳು ಕಂಡು ಬಂದಲ್ಲಿ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು